# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1426
ಉತ್ತರಿಸಬೇಕಾದ ದಿನಾಂಕ : 30.12.2022
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

| ಕ್ರಸ | ಪ್ರಶ್ನೆ | ಉತ್ತರ |
|---|---|---|
| 1 | ಯುವಜನ ಮತ್ತು ಕ್ರೀಡಾ ಸಂಸ್ಥೆಯಲ್ಲಿ ಯಾವ ಯಾವ ಕ್ರೀಡೆಗಳು ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ನಡೆದಿವೆ; (ಆಯೋಜನೆ ಮಾಡುತ್ತಿರುವವರ ವಿವರ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕೆಳಕಾಣಿಸಿದ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದ್ದು, ವಿವರ ಇಂತಿದೆ.<br><br>1. **ದಸರಾ ಕ್ರೀಡಾಕೂಟ:** ದಸರಾ ಕ್ರೀಡಾಕೂಟವನ್ನು ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ವಿಭಾಗ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಸಂಘಟಿಸಲಾಗುತ್ತಿದೆ. ಈ ಕ್ರೀಡಾಕೂಟದಲ್ಲಿ 1)ಅಥ್ಲೆಟಿಕ್ಸ್ 2) ಬಾಸ್ಕೆಟ್‌ಬಾಲ್ 3) ಫುಟ್ಬಾಲ್ 4)ವಾಲಿಬಾಲ್ 5) ಖೋ-ಖೋ 6) ಕುಸ್ತಿ 7) ಕಬಡ್ಡಿ 8) ಬ್ಯಾಡ್ಮಿಂಟನ್ 9)ಹಾಕಿ 10) ಹ್ಯಾಂಡ್ ಬಾಲ್ 11) ಜೂಡೋ 12) ಟೇಬಲ್ ಟೆನ್ನಿಸ್ 13) ಈಜು 14)ಜಿಮ್ನಾಸ್ಟಿಕ್ಸ್ 15) ಟೆನ್ನಿಸ್ 16) ಆರ್ಚರಿ 17)ಸೈಕ್ಲಿಂಗ್ 18) ಬಾಕ್ಸಿಂಗ್ 19)ವುಶು 20) ಟೆಕ್ವಾಂಡೋ 21)ನೆಟ್‌ಬಾಲ್ 22)ಭಾರ ಎತ್ತುವುದು 23) ಫೆನ್ಸಿಂಗ್ (ಕತ್ತಿವರಸೆ) 24) ಥ್ರೋಬಾಲ್ 25) ಯೋಗ 26) ಶೂಟಿಂಗ್ ಮತ್ತು 27) ಬಾಲ್ ಬ್ಯಾಡ್ಮಿಂಟನ್ ಕ್ರೀಡೆಗಳನ್ನು ಆಯೋಜಿಸಲಾಗುತ್ತದೆ.<br>2. **ಸರ್ಕಾರಿ ನೌಕರರ ಕ್ರೀಡಾಕೂಟ:** ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಸಂಘಟಿಸಲಾಗುತ್ತಿದೆ. ಈ ಕ್ರೀಡಾಕೂಟದಲ್ಲಿ 1)ಅಥ್ಲೆಟಿಕ್ಸ್ 2) ಬಾಸ್ಕೆಟ್ ಬಾಲ್ 3) ಫುಟ್ಬಾಲ್ 4)ವಾಲಿಬಾಲ್ 5) ಕುಸ್ತಿ 6) ಕಬಡ್ಡಿ 7) ಬ್ಯಾಡ್ಮಿಂಟನ್ 8)ಹಾಕಿ 10) ಟೇಬಲ್ ಟೆನ್ನಿಸ್ 11) ಈಜು 12) ಟೆನ್ನಿಸ್ 13)ಭಾರ ಎತ್ತುವುದು 14) ಥ್ರೋಬಾಲ್15) ಬಾಲ್ ಬ್ಯಾಡ್ಮಿಂಟನ್ 16) ಕೇರಂ 17) ಚೆಸ್ 18) ಟೆನ್ನಿಕಾಯ್ಟ್ 19)ಕ್ರಿಕೆಟ್ ಕ್ರೀಡೆಗಳನ್ನು ಆಯೋಜಿಸಲಾಗುತ್ತಿದೆ.<br>3. **ಕುಸ್ತಿ ಹಬ್ಬ:** ರಾಜ್ಯ ಮಟ್ಟದ ಕುಸ್ತಿ ಹಬ್ಬವನ್ನು ಆಯೋಜಿಸಲಾಗುತ್ತಿದೆ.<br>4. **ಗ್ರಾಮೀಣ ಕ್ರೀಡಾಕೂಟ:** 2022-23 ನೇ ಸಾಲಿನಲ್ಲಿ ವಿಶೇಷವಾಗಿ ಗ್ರಾಮೀಣ ಕ್ರೀಡಾಕೂಟಗಳನ್ನು ಪಂಚಾಯತ್, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಆಯೋಜಿಸಲಾಗುತ್ತಿದ್ದು, ಪ್ರಸ್ತುತ ರಾಜ್ಯದಾದ್ಯಂತ ವಿವಿಧ ಹಂತದ ಕ್ರೀಡಾಕೂಟಗಳು ಆಯೋಜನೆಗೊಳ್ಳುತ್ತಿವೆ. ಈ ಕ್ರೀಡಾಕೂಟದಲ್ಲಿ ಕುಸ್ತಿ, ಖೋ-ಖೋ, ಕಬಡ್ಡಿ, ವಾಲಿಬಾಲ್, |

| | | |
|---|---|---|
| | | ಯೋಗ, ಕಂಬಳ, ಎತ್ತಿನಗಾಡಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.<br><br>ಸದರಿ ಕ್ರೀಡಾಕೂಟಗಳನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ವಿವಿಧ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸುತ್ತಿದ್ದಾರೆ. |
| 2 | ರಾಜ್ಯದಲ್ಲಿ ಕ್ರೀಡಾ ಪ್ರಾಧಿಕಾರ ಯಾವಾಗ ರಚನೆಯಾಯಿತು; ರಚನೆಯ ಉದ್ದೇಶವೇನು: (ವಿವರ ನೀಡುವುದು) | ರಾಜ್ಯದಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರವು ದಿನಾಂಕ 05-05-1995 ರಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿ ~~ಕರ್ನಾಟಕ~~ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಾಯಿತ ಸಂಸ್ಥೆಯಾಗಿ ಸ್ಥಾಪಿತವಾಗಿರುತ್ತದೆ.<br><br>ಕರ್ನಾಟಕ ಕ್ರೀಡಾ ಪ್ರಾಧಿಕಾರದ ರಚನೆಯ ಉದ್ದೇಶ ಇಂತಿದೆ.<br><br>1. ಕ್ರೀಡಾಭಿವೃದ್ಧಿಗಾಗಿ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು.<br>2. ಚಾಲ್ತಿಯಲ್ಲಿರುವ ಸರ್ಕಾರದ ಮತ್ತು ರಾಜ್ಯ ಕ್ರೀಡಾ ಕೌನ್ಸಿಲ್‌ನ ಕಾರ್ಯಕ್ರಮಗಳ ಅನುಷ್ಠಾನ.<br>3. ಕ್ರೀಡೆಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿ.<br>4. ಕ್ರೀಡಾ ಮೂಲಸೌಕರ್ಯಗಳ ಯೋಜನೆ, ಅಭಿವೃದ್ಧಿ, ನಿರ್ಮಾಣ ಮತ್ತು ಸೇರ್ಪಡೆ.<br>5. ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಗೆ ಕ್ರೀಡಾಭಿವೃದ್ಧಿಗೆ ಸಂಬಂಧಿಸಿದಂತೆ ಸಲಹೆ ನೀಡುವುದು.<br>6. ಕ್ರೀಡೆಗೆ ಸಂಬಂಧಿಸಿದಂತೆ ಸಾಹಿತ್ಯಗಳ ಪ್ರಕಟಣೆ.<br>7. ಪ್ರಶಸ್ತಿಗಳು, ವಿದ್ಯಾರ್ಥಿ ವೇತನ ಮತ್ತಿತರ ಕಾರ್ಯಕ್ರಮಗಳು.<br>8. ಮೇಲಿನ ಗುರಿಗಳ ಸಾಧನೆಗಾಗಿ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು. |
| 3 | ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣ ಮಾಲೀಕತ್ವ ಯಾರ ಅಧೀನದಲ್ಲಿದೆ: (ಜಿಲ್ಲಾವಾರು ವಿವರ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎಲ್ಲಾ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ಸರ್ಕಾರದ ಮಾಲೀಕತ್ವಕ್ಕೆ ಒಳಪಟ್ಟಿವೆ. ಸದರಿ ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆಗೆ ಜಿಲ್ಲಾ ಕ್ರೀಡಾಂಗಣ ಸಮಿತಿ ಹಾಗೂ ತಾಲ್ಲೂಕು ಕ್ರೀಡಾಂಗಣ ಸಮಿತಿಗಳನ್ನು ರಚಿಸಲಾಗಿದ್ದು, ವಿವರ ಅನುಬಂಧ-1 ರಲ್ಲಿ ಇರಿಸಿದೆ. |
| 4 | ಗ್ರಾಮೀಣ ಮಟ್ಟದಲ್ಲಿ ಕ್ರೀಡೆ ಉತ್ತೇಜಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ: (ವಿವರ ನೀಡುವುದು) | ಗ್ರಾಮೀಣ ಮಟ್ಟದಲ್ಲಿ ಕ್ರೀಡೆ ಉತ್ತೇಜಿಸಲು ಸರ್ಕಾರವು ಈ ಕೆಳಗಿನಂತೆ ಕ್ರಮ ಕೈಗೊಂಡಿರುತ್ತದೆ.<br><br>• **ಕ್ರೀಡಾ ವಸತಿ ನಿಲಯಗಳು:** ಗ್ರಾಮೀಣ ಕ್ರೀಡೆಗಳಾದ ಕಬಡ್ಡಿ, ಕುಸ್ತಿ, ಖೋ-ಖೋ ಕ್ರೀಡೆಗಳಲ್ಲಿ ಪ್ರತಿಭಾನ್ವಿತ ಯುವ ಕ್ರೀಡಾಪಟುಗಳಿಗೆ ಕ್ರೀಡಾ ವಸತಿ ನಿಲಯಗಳಲ್ಲಿ ಪ್ರವೇಶ ನೀಡಿ, ವೈಜ್ಞಾನಿಕ ತರಬೇತಿ ನೀಡಲಾಗುತ್ತಿದೆ.<br>• **ಗ್ರಾಮೀಣ ಕ್ರೀಡಾಕೂಟ**: 2022-23 ನೇ ಸಾಲಿಗೆ ಗ್ರಾಮೀಣ ಕ್ರೀಡಾಕೂಟವನ್ನು ಉತ್ತೇಜಿಸುವ ಸಲುವಾಗಿ ಪ್ರಮುಖವಾಗಿ ಕಬಡ್ಡಿ, ಖೋ-ಖೋ, ಕುಸ್ತಿ,ಎತ್ತಿನಗಾಡಿ,ವಾಲಿಬಾಲ್ ಹಾಗೂ ಯೋಗ ಸ್ಪರ್ಧೆಗಳನ್ನೊಳಗೊಂಡ ಕ್ರೀಡಾಕೂಟವನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. |

| | | |
|---|---|---|
| | | • **ಕಬಡ್ಡಿ ಮ್ಯಾಟ್:** ಪ್ರತಿ ಜಿಲ್ಲೆಗೆ ತಲಾ 2 ರಂತೆ ಆಧುನಿಕ ಕಬಡ್ಡಿ ಮ್ಯಾಟ್ ಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರೀಡಾಪಟುಗಳ ಬಳಕೆಯಲ್ಲಿದೆ.<br>• **ದಸರಾ ಸಿ.ಎಂ. ಕಪ್:** ದಸರಾ ಸಿ.ಎಂ. ಕಪ್ ಕ್ರೀಡಾಕೂಟವನ್ನು ಪ್ರತಿ ವರ್ಷ ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟವನ್ನು ಮಹಿಳೆಯರಿಗೆ ಮತ್ತು ಪುರುಷರಿಗೆ ಮುಕ್ತ ವಿಭಾಗದಲ್ಲಿ ಆಯೋಜಿಸಲಾಗುತ್ತಿದೆ.<br>• **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:** ದೇಸಿ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ **ಕರ್ನಾಟಕ ಕ್ರೀಡಾ ಪ್ರಶಸ್ತಿ ಹಾಗೂ ನಗದನ್ನು** ನೀಡಿ ಗೌರವಿಸಲಾಗುತ್ತಿದೆ.<br>• **ಗರಡಿ ಮನೆ:** ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜಿಸುವ ಸಲುವಾಗಿ ಗರಡಿ ಮನೆ ನಿರ್ಮಾಣ ಮತ್ತು ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.<br>• **ಕುಸ್ತಿ ಹಬ್ಬ:** ಕುಸ್ತಿ ಕ್ರೀಡೆಯನ್ನು ಹಾಗೂ ಮಣ್ಣಿನ ಕುಸ್ತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕುಸ್ತಿ ಹಬ್ಬವನ್ನು ಆಯೋಜಿಸಲಾಗುತ್ತದೆ. ಭಾರತೀಯ ಮಣ್ಣಿನ ಕುಸ್ತಿ ಸಂಸ್ಥೆಯ ಮಾರ್ಗಸೂಚಿಯಂತೆ ದೇಹ ತೂಕದ ಆಧಾರದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ. |
| 5 | ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಚಟುವಟಿಕೆ ನಡೆಸುವ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ; ನೀಡಿದಲ್ಲಿ, ಸಂಸ್ಥೆವಾರು ವಿವರ ನೀಡುವುದು ? | ಹೌದು.<br><br>ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಚಟುವಟಿಕೆಗಳನ್ನು ನಡೆಸುವ ಸಂಸ್ಥೆಗಳಿಗೆ ಸರ್ಕಾರದಿಂದ ಕ್ರೀಡಾಕೂಟ ಆಯೋಜನೆಗೆ ಅನುದಾನ ಹಾಗೂ ಕ್ರೀಡಾ ಪೋಷಕ ಪ್ರಶಸ್ತಿ/ಪ್ರಶಸ್ತಿ ಮೊತ್ತ ನೀಡಲಾಗಿದ್ದು, ವಿವರ ಅನುಬಂಧ-02 ಮತ್ತು 03ರಲ್ಲಿ ಇರಿಸಿದೆ. |

**ವೈಎಸ್‌ಡಿ/ಇಬಿಬಿ/196/2022**

**(ಡಾ|| ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಜಿಲ್ಲಾ ಕ್ರೀಡಾಂಗಣ ಸಮಿತಿಯನ್ನು ಪುನರ್‌ರಚಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 341 ಯುಸೇಕ್ರೀ 2016, ದಿನಾಂಕ: 25.01.2017

2. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಇಎಸ್/ಗ್ರಾಕ್ರೀಪಂ/05/ಕ್ರೀನಿ/2017-18 ದಿನಾಂಕ: 24.07.2017.

******

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕ್ರೀಡಾಂಗಣ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಸದರಿ ಆದೇಶದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರುಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕ್ರೀಡಾಂಗಣಗಳ ಸಮಿತಿಯನ್ನು ಪುನರ್‌ರಚಿಸಲಾಗಿದ್ದು, ಜಿಲ್ಲಾಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಲಾಗಿರುವುದರಿಂದ ಜಿಲ್ಲಾ ಕ್ರೀಡಾಂಗಣ ಸಮಿತಿಯ ಖಾತೆಯನ್ನು ಜಿಲ್ಲಾಧಿಕಾರಿಗಳ ಪದನಾಮದಲ್ಲಿ ತೆರೆದು ನಿರ್ವಹಿಸಬೇಕಾಗಿರುವುದರಿಂದ, ಸದರಿ ಆದೇಶವನ್ನು ಮಾರ್ಪಡಿಸಿ ಜಿಲ್ಲಾಧಿಕಾರಿಗಳನ್ನು ಸದಸ್ಯರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕ್ರೀಡಾಂಗಣ ಸಮಿತಿ ಎಂದು ನೇಮಿಸಿ ಸರ್ಕಾರದ ಆದೇಶ ಹೊರಡಿಸುವಂತೆ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮೇಲೆ ಓದಲಾದ (2)ರ ದಿನಾಂಕ:24.07.2017ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

## ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 249 ಯುಸೇಕ್ರೀ 2017
## ಬೆಂಗಳೂರು, ದಿನಾಂಕ:29.08.2017

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರಾದೇಶಿಕ ಆಯುಕ್ತರುಗಳು, ಮೈಸೂರು, ಕಲ್ಬುರ್ಗಿ ಹಾಗೂ ಬೆಳಗಾವಿ ಇವರುಗಳನ್ನೊಳಗೊಂಡಂತೆ ಜಿಲ್ಲಾ ಕ್ರೀಡಾಂಗಣಗಳ ಸಮಿತಿಗಳಿಗೆ ಸದಸ್ಯರುಗಳ ನೇಮಕಾತಿಯನ್ನು ಪರಿಷ್ಕರಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

| | | |
|---|---|---|
| 1 | ಜಿಲ್ಲಾ ಉಸ್ತುವಾರಿ ಸಚಿವರು | ಅಧ್ಯಕ್ಷರು |
| 2 | ಜಿಲ್ಲಾ ಕ್ರೀಡಾಂಗಣವಿರುವ ಭೌಗೋಳಿಕ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 3 | ಪ್ರಾದೇಶಿಕ ಆಯುಕ್ತರು. (ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ) | ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸದಸ್ಯರು |
| 4 | ಜಿಲ್ಲಾಧಿಕಾರಿಗಳು. (ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಜಿಲ್ಲೆಗಳನ್ನು ಹೊರತುಪಡಿಸಿ) | ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸದಸ್ಯರು |
| 5 | ಜಿಲ್ಲಾಧಿಕಾರಿಗಳು, ಮೈಸೂರು, ಕಲ್ಬುರ್ಗಿ ಹಾಗೂ ಬೆಳಗಾವಿ ಜಿಲ್ಲೆಗಳು. | ಸದಸ್ಯರು |
| 6 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 7 | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 8 | ಮಹಾನಗರ ಪಾಲಿಕೆ/ಜಿಲ್ಲಾ ಪಂಚಾಯತ್/ಸಿ.ಎಂ.ಸಿ. ಅಧ್ಯಕ್ಷರು | ಸದಸ್ಯರು |
| 9 | ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು | ಸದಸ್ಯರು |

--2

| | | |
|---|---|---|
| 10 | ಕ್ರೀಡಾ ಕ್ಷೇತ್ರವನ್ನು ಪ್ರತಿನಿಧಿಸುವ 3 ಜನ | ಸದಸ್ಯರು |
| 11 | ಸಾರ್ವಜನಿಕರು (ಒಬ್ಬರು ಮಹಿಳೆ, ಒಬ್ಬರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಒಳಗೊಂಡಂತೆ 3 ಜನ) | ಸದಸ್ಯರು |
| 12 | ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಸದಸ್ಯ ಕಾರ್ಯದರ್ಶಿ |

ಪ್ರಾದೇಶಿಕ ಆಯುಕ್ತರು/ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಕ್ರೀಡಾಂಗಣ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡತಕ್ಕದ್ದು.

ಮೇಲ್ಕಂಡ ಜಿಲ್ಲಾ ಕ್ರೀಡಾಂಗಣ ಸಮಿತಿಗಳು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ತಾಲ್ಲೂಕು ಕ್ರೀಡಾಂಗಣ ಸಮಿತಿಗಳು ಈ ಆದೇಶದೊಂದಿಗೆ ಲಗತ್ತಿಸಿರುವ ಮಾರ್ಗಸೂಚಿಗಳಂತೆ ಕಾರ್ಯ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್.ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ& ಎಸ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ& ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ- ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮೂಲಕ.
5. ಪ್ರಾದೇಶಿಕ ಆಯುಕ್ತರು, ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ -ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮೂಲಕ.
6. ಎಲ್ಲಾ ಜಿಲ್ಲಾಧಿಕಾರಿಗಳಿಗೆ-ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮೂಲಕ.
7. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
8. ನಿರ್ದೇಶಕರು, ರಾಜ್ಯ ಹುಜುರ್ ಖಜಾನೆ, ಬೆಂಗಳೂರು.
9. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ - ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮೂಲಕ.
10. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ-ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮೂಲಕ.
11. ಎಲ್ಲಾ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
12. ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು,
13. ವಿಕಾಸ ಸೌಧ, ಬೆಂಗಳೂರು.
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
15. ಸರ್ಕಾರದ ಉಪ ಕಾರ್ಯದರ್ಶಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
16. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಜಿಲ್ಲಾ ಕ್ರೀಡಾಂಗಣ ಸಮಿತಿ ಹಾಗೂ ತಾಲ್ಲೂಕು ಕ್ರೀಡಾಂಗಣ ಸಮಿತಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳು

1. ಸರ್ಕಾರದ ಪೂರ್ವಾನುಮತಿಯಿಲ್ಲದೇ ಜಿಲ್ಲಾ/ತಾಲ್ಲೂಕು ಕ್ರೀಡಾಂಗಣ ಸಮಿತಿಯಿಂದ ಯಾವುದೇ ನೇಮಕಾತಿಯನ್ನು ಮಾಡಲು ಅವಕಾಶವಿರುವುದಿಲ್ಲ. ಒಂದೊಮ್ಮೆ ನೇಮಕಾತಿ ಮಾಡಲು ತೀರ್ಮಾನಿಸಿದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಾಗಿರುತ್ತದೆ

2. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣ ಸೌಲಭ್ಯಗಳ ಉತ್ತಮ ನಿರ್ವಹಣೆ ಸಲುವಾಗಿ ಪ್ರತಿಯೊಂದು ಆಟದ ಅಂಕಣಗಳಿಗೆ ಪ್ರವೇಶ ಶುಲ್ಕ ನಿಗಧಿಪಡಿಸಿ ಅದರಂತೆ ಜಾರಿಗೊಳಿಸುವುದು.

3. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣ ಹಾಗೂ ಇನ್ನಿತರೆ ಕ್ರೀಡಾ ಅಂಕಣಗಳನ್ನು ಕ್ರೀಡೆ/ಕ್ರೀಡೇತರ ಚಟುವಟಿಕೆಗಳಿಗೆ ಬಾಡಿಗೆ ನೀಡುವ ಸಂದರ್ಭದಲ್ಲಿ ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ ನಿಗಧಿಪಡಿಸಿದ ದರದಂತೆ ಜಾರಿಗೊಳಿಸುವುದು.

4. ವಾಣಿಜ್ಯ ಮಳಿಗೆಗಳಿಗೆ ಬಾಡಿಗೆ ನಿರ್ಧರಿಸುವಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಕಾಲ ಕಾಲಕ್ಕೆ ಹೊರಡಿಸುವ ಬಾಡಿಗೆ ನಿಯಮಗಳನ್ನು ಅನುಸರಿಸಿ ಅದರಂತೆ ಕ್ರೀಡಾಂಗಣ ಸಮಿತಿಯ ಮೂಲಕ ನಿಗಧಿಪಡಿಸಿ ಜಾರಿಗೊಳಿಸುವುದು.

5. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣಗಳ ಭದ್ರತೆಗೆ ಅವಶ್ಯವಿರುವ ಭದ್ರತಾ ಸಿಬ್ಬಂದಿಗಳನ್ನು ಕ್ರೀಡಾಂಗಣ ಸಮಿತಿ ಮೂಲಕ ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೂಲಕ ನೇಮಿಸಲು ಕ್ರಮವಹಿಸುವುದು.

6. ಜಿಲ್ಲಾ/ತಾಲ್ಲೂಕು ಕ್ರೀಡಾ ಅಂಕಣಗಳ ಬಾಡಿಗೆ, ಪ್ರವೇಶ ಶುಲ್ಕ ಹಾಗೂ ಇನ್ನಿತರೇ ಆದಾಯಗಳನ್ನು ಕಡ್ಡಾಯವಾಗಿ ಕ್ರೀಡಾಂಗಣ ಸಮಿತಿ ಖಾತೆಗೆ ಜಮೆಗೊಳಿಸುವುದು.

7. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣ ನಿರ್ವಹಣೆಗೆ ಅವಶ್ಯವಿರುವ ತರಬೇತುದಾರರು, ಮಾರ್ಕರ್ಸ್, ಸ್ವಚ್ಛತಾ ಸಿಬ್ಬಂದಿ, ಸ್ಕ್ಯಾವೆಂಜರ್ಸ್ ಇನ್ನಿತರೆ ಅಗತ್ಯ ಸಿಬ್ಬಂದಿಗಳನ್ನು ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಅನುಸರಿಸಿ ಹೊರಗುತ್ತಿಗೆ ಆಧಾರದ ಮೇಲೆ ಕ್ರೀಡಾಂಗಣ ಸಮಿತಿಯ ಅನುಮತಿ ಪಡೆದು ಕೆ.ಟಿ.ಪಿ.ಪಿ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

8. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣದ ನಿರ್ವಹಣೆ ಹಾಗೂ ಈ ಸಂಬಂಧಿಸಿದ ಅವಶ್ಯಕ ದುರಸ್ತಿ ಹಾಗೂ ಅಗತ್ಯ ಅಂಕಣಗಳ ನಿರ್ಮಾಣ ಕಾರ್ಯಗಳನ್ನು ಕ್ರೀಡಾಂಗಣ ಸಮಿತಿಯ ಅನುಮತಿ ಪಡೆದು ನಿರ್ವಹಿಸುವುದು

9. ಜಿಲ್ಲಾ/ತಾಲ್ಲೂಕು ಕ್ರೀಡಾಂಗಣಗಳಲ್ಲಿ ಪ್ರಮುಖ ನಿರ್ಮಾಣ ಕಾಮಗಾರಿಗಳನ್ನು (ಕೇಂದ್ರ, ರಾಜ್ಯ, ಸ್ಥಳೀಯ ಅಥವಾ ಇನ್ನಿತರೆ ಅನುದಾನ ಮೂಲಕ) ನಿರ್ವಹಿಸುವಾಗ ಸರ್ಕಾರದ ಪೂರ್ವಾನುಮತಿ ಪಡೆಯುವುದು.

10. ಜಿಲ್ಲಾ ಕ್ರೀಡಾಂಗಣಕ್ಕೆ ಸಂಬಂಧಿಸಿದ ಆದಾಯಗಳನ್ನು ಪ್ರಾದೇಶಿಕ ಆಯುಕ್ತರು/ಜಿಲ್ಲಾಧಿಕಾರಿಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕ್ರೀಡಾಂಗಣ ಸಮಿತಿ ರವರ ಹೆಸರಿನ ಖಾತೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ನಿರ್ವಹಿಸುವುದು.

(ಆರ್.ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ/ನಿರ್ವಹಣೆ ಕ್ರೀಡಾಂಗಣ ಸಮಿತಿಗೆ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳ ಬದಲು ಸ್ಥಳೀಯ ಶಾಸಕರನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ವಾಪ್ರಯು 186 ಯುಸೇಕ್ರೀ 2015, ದಿನಾಂಕ: 06-01-2006.

2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್/ಕ್ರಿಯೋ-3/02/2014-15,ದಿ: 24-11-2015 ಮತ್ತು 14-01-2016.

******

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ, ತಾಲ್ಲೂಕು ಹಾಗೂ ಜಿಲ್ಲಾ ಕ್ರೀಡಾಂಗಣ ನಿರ್ಮಾಣ/ ನಿರ್ವಹಣೆಗೆ ಕ್ರೀಡಾಂಗಣ ಸಮಿತಿಗಳನ್ನು ಕ್ರಮವಾಗಿ ಸಂಬಂಧಿಸಿದ ತಾಲ್ಲೂಕು ಕಾರ್ಯನಿರ್ವಹಣಾ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿ ಆದೇಶಿಸಲಾಗಿರುತ್ತದೆ.

ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ/ನಿರ್ವಹಣೆ ಕ್ರೀಡಾಂಗಣ ಸಮಿತಿಯನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ (2)ರ ಪತ್ರಗಳಲ್ಲಿ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 141 ಯುಸೇಕ್ರೀ 2015,**

**ಬೆಂಗಳೂರು, ದಿನಾಂಕ: 28-01-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ / ನಿರ್ವಹಣೆ ಮಾಡಲು ತಾಲ್ಲೂಕು ಕ್ರೀಡಾಂಗಣ ಸಮಿತಿಗೆ ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿಗಳ ಬದಲು ಸ್ಥಳೀಯ ಶಾಸಕರನ್ನು (ತಾಲ್ಲೂಕು ಕ್ರೀಡಾಂಗಣವಿರುವ ಭೌಗೋಳಿಕ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭಾ ಕ್ಷೇತ್ರದ ಶಾಸಕರು) ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿ, ತಾಲ್ಲೂಕು ಕ್ರೀಡಾಂಗಣ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಿ ಆದೇಶಿಸಿದೆ.

**ತಾಲ್ಲೂಕು ಮಟ್ಟ**

| | | |
|---|---|---|
| 1. ಸ್ಥಳೀಯ ವಿಧಾನಸಭಾ ಸದಸ್ಯರು | - | ಅಧ್ಯಕ್ಷರು |
| 2. ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ | - | ಸದಸ್ಯರು |
| 3. ಮುಖ್ಯ ಅಧಿಕಾರಿ, ನಗರ ಸಭೆ/ ಪುರಸಭೆ/ಪಟ್ಟಣ ಪಂಚಾಯಿತಿ | - | ಸದಸ್ಯರು |

4. ಸ್ಥಳೀಯ ಕ್ರೀಡಾಪಟುಗಳು-2 (ಅಂತರ ರಾಷ್ಟ್ರ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪದಕ ವಿಜೇತರು/ಪ್ರತಿನಿಧಿಸಿದವರು) ಸಂಸ್ಥೆಗಳು - ಸದಸ್ಯರು - ಸದಸ್ಯರು
5. ಕ್ಷೇತ್ರ ಶಿಕ್ಷಣಾಧಿಕಾರಿಗಳು - ಸದಸ್ಯ ಕಾರ್ಯದರ್ಶಿ
6. ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್. ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ), ಕರ್ನಾಟಕ, ಪಿ.ಬಿ.ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ, ಬೆಂಗಳೂರು.
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ / ನಿರ್ವಹಣೆಯ ಕ್ರೀಡಾಂಗಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ (ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮುಖಾಂತರ)
9. ಆಂತರಿಕ ಆರ್ಥಿಕ ಸಲಹೆಗಾರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
11. ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಸಹಾಯಕರು.
12. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

## ಅನುಬಂಧ-02

### ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಿತ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಗ್ರಾಮೀಣ ಮಟ್ಟದಲ್ಲಿ ಕ್ರೀಡಾಕೂಟಗಳ ಆಯೋಜನೆಗೆ ವಿವಿಧ ಕ್ರೀಡಾ ಸಂಸ್ಥೆಗಳಿಗೆ ಒದಗಿಸಿರುವ ಅನುದಾನದ ವಿವರ

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ವಿವರ | ಪಾವತಿಸಿದ ಮೊತ್ತ |
|---|---|---|---|
| 1 | ಮಂಡ್ಯ ಜಿಲ್ಲಾ ಫುಟ್ಬಾಲ್ ಸಂಸ್ಥೆ | ದಿನಾಂಕ: 31-01-2020 ರಿಂದ 12-01-2022 ರವರೆಗೆ ಮಂಡ್ಯ ಜಿಲ್ಲೆಯಲ್ಲಿ ಅಖಿಲ ಭಾರತ ಆಮಂತ್ರಣ ಫುಟ್ಬಾಲ್ ಸಿ ಎಂ ಕಪ್-2020 ರ ಆಯೋಜನೆ | 15,00,000.00 |
| 2 | ಕರ್ನಾಟಕ ಅಮೆಚೂರ್ ಆಟ್ಯಾ ಪಾಟ್ಯಾ ಸಂಸ್ಥೆ | ದಿನಾಂಕ: 17-03-2021 ರಿಂದ 18-03-2021 ರವರೆಗೆ ನರಗುಂದ, ಕಲ್ಬುರ್ಗಿಯಲ್ಲಿ ರಾಜ್ಯ ಜೂನಿಯರ್ ಮತ್ತು ಸಬ್ ಜೂನಿಯರ್ ಆಟ್ಯಾ ಪಾಟ್ಯಾ ಕ್ರೀಡೆಯ ಆಯೋಜನೆ | 30,000.00 |
| 3 | ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ | ದಿನಾಂಕ: 19-02-2021 ರಿಂದ 21-02-2021 ರವರೆಗೆ ಗದಗ್‌ನಲ್ಲಿ ನಡೆದ ಎಲ್ಲಾ ವಯೋಮಾನದ ಬಾಲಕ ಮತ್ತು ಬಾಲಕಿಯರ 17 ನೇ ರಾಷ್ಟ್ರೀಯ ಎಂಟಿಬಿ ಸೈಕ್ಲಿಂಗ್ ಚಾಂಪಿಯನ್‌ಶಿಪ್ ಆಯೋಜನೆ | 1,50,000.00 |
| 4 | ಕರ್ನಾಟಕ ಅಮೆಚೂರ್ ಸೆಪಕ್ ಟಕ್ರಾ ಸಂಸ್ಥೆ | ದಿನಾಂಕ: 13-03-2021 ರಿಂದ 14-03-2021 ರವರೆಗೆ ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ 9ನೇ ಸೆಪಕ್ ಟಕ್ರಾ ಆಯೋಜನೆ | 30,000.00 |
| 5 | ಕಾಯಕಯೋಗಿ ಫೌಂಡೇಶನ್, ಮಂಡ್ಯ | ದಿನಾಂಕ: 28-11-2021 ರಂದು ಮಂಡ್ಯದಲ್ಲಿ ಮಂಡ್ಯ ಮ್ಯಾರಥಾನ್ ಓಟವನ್ನು ಆಯೋಜಿಸಲು ಅನುದಾನವನ್ನು ಒದಗಿಸುವ ಸಂಬಂಧ | 1,00,000.00 |

## ಅನುಬಂಧ - 03

**ಕ್ರೀಡಾ ಪೋಷಕ ಪ್ರಶಸ್ತಿ**

ಕ್ರೀಡಾ ಪ್ರತಿಭೆಗಳನ್ನು ಎಳೆಯ ಹಂತದಲ್ಲಿಯೇ ಗುರುತಿಸಿ ಪ್ರೋತ್ಸಾಹಿಸುತ್ತಿರುವ, ಕ್ರೀಡಾಪಟುಗಳಿಗೆ ಉದ್ಯೋಗ, ಶಿಕ್ಷಣ ನೀಡುತ್ತಿರುವ, ಕ್ರೀಡೆಯನ್ನು ಅಭಿವೃದ್ಧಿಯ ಸಾಧನವಾಗಿ ಪರಿಗಣಿಸಿ ಕ್ರೀಡಾಸ್ಪರ್ಧೆ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ಹಾಗೂ ಕಂಪನಿಗಳ ಸಾಮಾಜಿಕ ಜವಾಬ್ದಾರಿ ಅಡಿ ಕ್ರೀಡೆಗೆ ಪ್ರೋತ್ಸಾಹ ನೀಡಿ, ಕ್ರೀಡಾಪಟುಗಳ ಕ್ರೀಡಾಸಾಧನೆಗೆ ಬೆನ್ನೆಲುಬಾಗಿ ನಿಂತಿರುವ ಸಂಸ್ಥೆಗಳು/ ವಿಶ್ವವಿದ್ಯಾನಿಲಯಗಳು/ ಕಂಪನಿಗಳಿಗೆ 2017-18ನೇ ಸಾಲಿನಿಂದ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಸದರಿ ಪ್ರಶಸ್ತಿಯು ರೂ 5.00 ಲಕ್ಷಗಳ ನಗದು ಹಾಗು ಪ್ರಶಸ್ತಿ ಪತ್ರವನ್ನೊಳಗೊಂಡಿದ್ದು, ಇದುವರೆಗೆ ಪ್ರಶಸ್ತಿ ಪಡೆದಿರುವ 28 ಸಂಸ್ಥೆಗಳಲ್ಲಿ ಗ್ರಾಮೀಣ ಪ್ರದೇಶದ ಸಂಸ್ಥೆಗಳ ವಿವರ ಇಂತಿದೆ.

| ಕ್ರ. ಸಂ | ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ಪಡೆದ ಸಂಸ್ಥೆಯ ಹೆಸರು | ವರ್ಷ | ಮೊತ್ತ |
|---|---|---|---|
| 1 | ಕಂಬಳ ಸಂರಕ್ಷಣೆ, ನಿರ್ವಹಣೆ ಮತ್ತು ತರಬೇತಿ ಅಕಾಡೆಮಿ, ಮಿಯಾರ್ | 2017-18 | 5,00,000-00 |
| 2 | ಕ್ಯಾತನಹಳ್ಳಿ ಕ್ರೀಡಾ ಒಕ್ಕೂಟ (ರಿ), ಕ್ಯಾತನ ಹಳ್ಳಿ, ಪಾಂಡವಪುರ ತಾ, ಮಂಡ್ಯ | 2017-18 | 5,00,000-00 |
| 3 | ಕ್ರೀಡಾ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರ ನಿ, ಚಂದರಗಿ | 2017-18 | 5,00,000-00 |
| 4 | ಕಂಠೀರವ ಕೇಸರಿ ರತನ್ ಮಠಪತಿ ಸ್ಪೋರ್ಟ್ಸ್ ಅಂಡ್ ಎಜುಕೇಷನ್ ಸೊಸೈಟಿ, ಬಾಗಲಕೋಟೆ ಜಿಲ್ಲೆ | 2017-18 | 5,00,000-00 |
| 5 | ಕೃಷ್ಣಾ ತೀರ ರೈತ ಸಂಘ (ರಿ), ಜಮಖಂಡಿ ತಾಲ್ಲೂಕು | 2017-18 | 5,00,000-00 |
| 6 | ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ) ಶ್ರೀ ಆದಿಚುಂಚನಗಿರಿ ಕ್ಷೇತ್ರ, ಬೆಳ್ಳೂರು, ನಾಗಮಂಗಲ ತಾ\|\|, ಮಂಡ್ಯ | 2017-18 | 5,00,000-00 |
| 7 | ಆರ್.ವಿ.ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್, ಉತ್ತರ ಕನ್ನಡ | 2018-19 | 5,00,000-00 |